(೧) ಹಾಗಿದ್ದಲ್ಲಿ ಅದರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ವಿ. ಎಲ್. ಪಾಟೀಲ್ (ಸಮಾಜ ಕಲ್ಯಾಣ ಮಂತ್ರಿಗಳು). —

(ಅ) ವಿಜಾಪುರ ಜಿಲ್ಲೆಯಲ್ಲಿ ಒಟ್ಟು ಹದಿನಾರು ಸ್ವಯಂ ಸೇವಾ ಸಂಸ್ಥೆಗಳು ಸಮಾಜ ಕಲ್ಯಾಣ ಇಲಾಖೆಯಿಂದ ಸಹಾಯಧನ ಪಡೆದಿರುತ್ತವೆ.

(ಆ) ಐದು ನಿರ್ಗತಿಕ ಮಕ್ಕಳ ಗೃಹ ನಡೆಸುವ ಸ್ವಯಂ ಸೇವಾ ಸಂಸ್ಥೆಗಳ ಬಗ್ಗೆ ಮಾತ್ರ ಆಪಾದನೆಗಳು ಬಂದಿರುತ್ತವೆ.

(೧) ಬಿಜಾಪುರ ಜಿಲ್ಲೆಯ ಸಹಾಯಕ ನಿರ್ದೇಶಕರಿಗೆ ದೂರುಗಳ ಬಗ್ಗೆ ಪೂರ್ಣ ತನಿಖೆ ಮಾಡಲು ತಿಳಿಸಲಾಯಿತು. ಮೂರು ಸಂಸ್ಥೆಗಳ ಬಗ್ಗೆ ವಿವರವಾದ ತನಿಖೆ ನಡೆಸಲಾಯಿತು. ತನಿಖಾ ವರದಿಗಳನ್ನು ಸೂಕ್ಷ್ಮ ಪರಿಶೀಲಿಸಿದ ನಂತರ ಎರಡು ಸಂಸ್ಥೆಗಳಿಗೆ ಧನ ಸಹಾಯವನ್ನು ಮಂಜೂರು ಮಾಡಲಾಯಿತು.

ಮತ್ತೊಂದು ಸಂಸ್ಥೆಯ ಬಗ್ಗೆ ಮುಚ್ಚುವ ಆದೇಶ ಹೊರಡಿಸಲಾಗಿದೆ.

ಉಳಿದ ಎರಡು ಸಂಸ್ಥೆಗಳ ಬಗ್ಗೆ ಪ್ರಧಾನ ಕಛೇರಿಯ ಹಿರಿಯ ಅಧಿಕಾರಿಗಳಿಂದ ತನಿಖೆ ಮಾಡಿಸಿ ಮುಂದಿನ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ವಿಜಾಪುರ ಜಿಲ್ಲೆಯಲ್ಲಿರುವ ಮುಳುನಾಡಿ ನೀರಾವರಿ ಯೋಜನೆ

೬೭೯. ಶ್ರೀ ಎಂ. ಉಸ್ತಾದ್ (ವಿಜಾಪುರ) ಮಾನ್ಯ ಲೋಕೋಪಯೋಗಿ ಜಲಾನಯನ ಪ್ರದೇಶಾಭಿವೃದ್ಧಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬಿಜಾಪುರ ಜಿಲ್ಲೆಯ ಮುಳವಾಡ ನೀರಾವರಿ ಯೋಜನೆಗೆ ವಿಶ್ವ ಬ್ಯಾಂಕ್‌ನಿಂದ ಮಂಜೂರಾದ ಹಣದ ಪೊತ್ತವೆಷ್ಟು ? ಹಾಗೂ ಸದರಿ ಯೋಜನೆ ಯಾವಾಗ ಪ್ರಾರಂಭವಾಯಿತು.

(ಆ) ಈ ಯೋಜನೆಗೆ ರಾಜ್ಯ ಸರ್ಕಾರದವರು ನೀಡಿರುವ ಹಣದ ಪೊತ್ತವೆಷ್ಟು ?

(೧) ಈ ಯೋಜನೆ ಯಾವಾಗ ಪೂರ್ತಿಗೊಳ್ಳುವುದು ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

(ಅ) ಮುಳುವಾಡ ನೀರಾವರಿ ಯೋಜನೆಗೆ ವಿಶ್ವ ಬ್ಯಾಂಕ್‌ನಿಂದ ಧನ ಸಹಾಯ ದೊರೆತಿಲ್ಲ ಯೋಜನೆ ಇನ್ನೂ ಪ್ರಾರಂಭವಾಗಿಲ್ಲ.

(ಆ) ಈ ಯೋಜನೆಯು ಮಂಜೂರಾಗಿರುವ ಕೃಷ್ಣಾ ಮೇಲ್ಕಂಡ ಯೋಜನೆಯ ಮೊದಲ ಘಟ್ಟದಲ್ಲಿ ಸೇರಿಲ್ಲವಾದ್ದರಿಂದ ರಾಜ್ಯ ಸರ್ಕಾರದಿಂದ ಇದುವರೆಗೆ ಹಣ ನೀಡಿಲ್ಲ.

(೧) ಉದ್ಭವಿಸುವುದಿಲ್ಲ.

ಬಿಳಗಿ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆ.

೬೮೦. ಶ್ರೀ ಬಾಬುರೆಡ್ಡಿ ಎಂ. ತುಂಗಳ (ಬಿಳಗಿ).—ಮಾನ್ಯ ಅರಣ್ಯ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಬಿಳಗಿ ತಾಲ್ಲೂಕಿನಲ್ಲಿ ಸಾಮಾಜಿಕ ಅರಣ್ಯ ಯೋಜನೆಯನ್ನು ಎಷ್ಟು ಎಕರೆಯಲ್ಲಿ ವಿಸ್ತರಿಸಲಾಗಿದೆ ?

(ಆ) ಹಾಗಿದ್ದರೆ ವಿವರವಾದ ಮಾಹಿತಿಯನ್ನೊದಗಿಸುವುದು ?

(೧) ಪ್ರಸಕ್ತ ವರ್ಷದಲ್ಲಿ ಈ ಯೋಜನೆಯ ಅಡಿಯಲ್ಲಿ ಕೈಗೊಳ್ಳುವ ಕ್ರಮಗಳಾವುವು ?